## ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.

ಸಿ.ಸಿ. ನಂ– 431/2020

Cw–10 Pw–5

| | |
|---|---|
| ಹೆಸರು | ಎಸ್ ರೋಹಿತ |
| ವಯಸ್ಸು | 45 ವರ್ಷ |
| ಉದ್ಯೋಗ | ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಹಿರಿಯ ಭೂ ವಿಜ್ಞಾನಿ |
| ಸಾಕೀನ | ಕಲಬುರ್ಗಿ |

ದಿನಾಂಕಃ 19–06–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದ–**

ನಾನು ಬಾಗಲಕೋಟೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ, ಉಪ ನಿರ್ದೇಶಕನಾಗಿ 23–12–2019 ರಿಂದ 2021 ರವರೆಗೆ ಕಾರ್ಯನಿರ್ವಹಿಸಿದ್ದೇನೆ.

ದಿಃ 02–12–2019 ರಂದು ನನಗೆ ಜಮಖಂಡಿ ಗ್ರಾಮೀಣ ಪೋಲಿಸ ಠಾಣೆಯಿಂದ ವಿನಂತಿ ಪತ್ರ ಬಂದಿರುತ್ತದೆ. ಎರಡು ಮರಳಿನ ಶಾಂಪಲ ಪಾಕೆಟಗಳನ್ನು ಕೊಟ್ಟು ಅವು ಮರಳು ಹೌದು ಅಲ್ಲವೋ ಎಂದು ಪರಿಕ್ಷಿಸಲು ಹೇಳಿದ್ದರು. ದಿಃ 06–01–2020 ರಂದು ಭೂ ವಿಜ್ಞಾನಿ ಅದನ್ನು ಪರಿಶೀಲಿಸಿ ಅದನ್ನು ಮರಳು ಎಂದು ಧೃಡಿಕರಿಸಿರುತ್ತಾರೆ. ಅದು ಮರಳು ಎಂದು ಧೃಡಿಕರಿಸಿ ಅದರ ವರದಿಯನ್ನು ಜಮಖಂಡಿ ಗ್ರಾಮೀಣ ಪೋಲಿಸ ಠಾಣೆಗೆ ಕಳುಹಿಸಿರುತ್ತೇನೆ. ನಾನು ಈಗ ಆ ವರದಿಯನ್ನು ನೋಡುತ್ತಿದ್ದೇನೆ. ಸದರಿ ವರದಿಯನ್ನು ನಿಪಿ–10 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–10(ಎ) ಎಂದು ಗುರುತಿಸಲಾಯಿತು. ಮರಳಿನ ಶಾಂಪಲಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ಮುಮಾ–1 ಮತ್ತು 2 ಎಂದು ಗುರುತಿಸಲಾಗಿದೆ. ನ್ಯಾಯಾಲಯದ ಮುಂದಿರುವ ಮುಮಾ–1 ಮತ್ತು 2 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ. ಎ ಎಸ್ ಎನ್ ಆರೋಪಿ ಪರ ವಕೀಲರಿಂದ–**

ಎರಡು ಮರಳಿನ ಶಾಂಪಲ ಪಾಕೆಟಗಳನ್ನು ಸ್ವಿಕರಿಸಿ ಅದನ್ನು ಮರಳು ಎಂದು ಧೃಡಿಕರಿಸಿ ಸುಳ್ಳು ವರದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ದಿಃ 02–12–2019 ರಂದು ನನಗೆ ಜಮಖಂಡಿ ಗ್ರಾಮೀಣ ಪೋಲಿಸ ಠಾಣೆಯಿಂದ ವಿನಂತಿ ಪತ್ರ ಬಂದಿರುತ್ತದೆ. ಎರಡು ಮರಳಿನ ಶಾಂಪಲ ಪಾಕೆಟಗಳನ್ನು ಕೊಟ್ಟು ಅವು ಮರಳು

ಹೌದು ಅಲ್ಲವೋ ಎಂದು ಪರಿಕ್ಷಿಸಲು ಹೇಳಿದ್ದರು ಎಂದು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 06-01-2020 ರಂದು ಭೂ ವಿಜ್ಞಾನಿ ಅದನ್ನು ಪರಿಶೀಲಿಸಿ ಅದನ್ನು ಮರಳು ಎಂದು ಧೃಡಿಕರಿಸಿರುತ್ತಾರೆ. ಅದು ಮರಳು ಎಂದು ಧೃಡಿಕರಿಸಿ ಅದರ ವರದಿಯನ್ನು ಜಮಖಂಡಿ ಗ್ರಾಮೀಣ ಪೋಲಿಸ ಠಾಣೆಗೆ ಕಳುಹಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.